Sri H. SIDDAVEERAPPA.—Well, I will consider about it.

ಶ್ರೀ ಎ. ಆರ್. ನಾಯ್ಡು.—ಕ್ಷಾಮ ನಿವಾರಣೆಗೆಂದು ಹೇಳಿ ಹಣವನ್ನು ಹಂಚಿದಿರಿ. ಆ ಹಣ ಬಹಳ ದುರುಪಯೋಗವಾಗಿದೆಯೆಂಬುದು ತಮ್ಮ ಗಮನಕ್ಕೆ ಬಂದಿದೆಯೆ?

ಶ್ರೀ ಎಚ್. ಸಿದ್ದವೀರಪ್ಪ.—ಅಲ್ಲಲ್ಲಿ ಕೆಲವುಕಡೆ ದುರುಪಯೋಗವಾಗಿದೆ ಎಂದು ಬಂದಿದೆ.

ಶ್ರೀ ಎ. ಆರ್. ನಾಯ್ಡು.—ಅವರಿಗೆಲ್ಲಾ, ಅಂದರೆ ಅಪರಾಧಿಗಳಿಗೆ, ಏನು ಮಾಡುತ್ತೀರಿ?

ಶ್ರೀ ಎಚ್. ಸಿದ್ದವೀರಪ್ಪ.—ತನಿಖೆಮಾಡಬೇಕು; ಯಾರು ಯಾರು ತಪ್ಪು ತನ್ನವರು, ಯಾವರೀತಿ ತಪ್ಪು ಮಾಡಿದ್ದಾರೆ ಎಂಬುದು ಸಾಬೀತದ ಮೇಲೆ ಯೋಚನೆ ಮಾಡಬೇಕು.

ಶ್ರೀ ಎ. ಆರ್. ನಾಯ್ಡು.—ಅದರಲ್ಲಿ ಈ ಸಭೆಯ ಸದಸ್ಯರು ಎಷ್ಟು ಜನರಿದ್ದಾರೆ?

ಶ್ರೀ ಎಚ್. ಸಿದ್ದವೀರಪ್ಪ.—ಗೊತ್ತಿಲ್ಲ.

ಶ್ರೀ ಎ. ಮುನಿಯಪ್ಪ.—ತಕ್ಕಾಪಿ ಸಾಲವನ್ನು ಕೊಡುವುದು ಎತ್ತುಗಳನ್ನು ಕೊಂಡುಕೊಳ್ಳುವುದಕ್ಕಲ್ಲವೆ?

ಶ್ರೀ ಎಚ್. ಸಿದ್ದವೀರಪ್ಪ.—ಬರಿಯ ಎತ್ತುಗಳನ್ನು ಕೊಂಡುಕೊಳ್ಳುವುದಕ್ಕೇ ಅಲ್ಲ, ಬೀಜ, ಗೊಬ್ಬರ ಮುಂತಾದ ವ್ಯವಸಾಯ ಸಲಕರಣೆಗಳೂ ಸೇರುತ್ತವೆ.

ಶ್ರೀ ಎ. ಮುನಿಯಪ್ಪ.—ಕೆಲವು ಸಂದರ್ಭಗಳಲ್ಲಿ ಈ ಸಾಲಗಳನ್ನು ಬಹಳ ಕಡಮೆ ಕೊಡುತ್ತಾರೆ. ಚಿಕ್ಕಬಳ್ಳಾಪುರ ತಾಲ್ಲೂಕಿನಲ್ಲಿ 25 ರೂಪಾಯಿಗಳನ್ನು ಕೊಡುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೆ?

(ಉತ್ತರವಿಲ್ಲ.)

Mr. SPEAKER.—Question Nos. 74 and 333 may be taken up together.

Monopolisation of Bus Routes.

Q.—74. Sri B. C. NANJUNDAIYA (Kora).—

Will the Government be pleased to state:—

(*a*) the number of private buses that were affected after the monopolisation of certain routes by the Road Transport Authorities;

(*b*) the number of extra buses, introduced by the Road Transport authorities in these routes;

(*c*) the actual amount that the Government were getting from the above private buses by way of Road Cess, Seating Tax, Petrol Tax and other taxes per annum (figures may kindly be given itemwar);

(*d*) whether it is a fact that the Government have issued circulars to the concerned authorities, to allow the Road Transport Buses to overload the passengers as well as the luggage?

A.—Sri H. SIDDAVEERAPPA (Minister for Home and Industries).—

(*a*) 198.

(*b*) 13.

Certain shuttle trips are also arranged between congested traffic points.

(*c*) (*i*) Seat-tax Rs. 1,15,327-8-0 per annum.

(*ii*) Mileage cess Rs. 2,46,910-15-4 per annum.

Information regarding other taxes is not available.

(*d*) No.

Q.—333. Sri K. S. VASANT (Kolar Gold Fields).—

Will the Government be pleased to state:—

(*a*) the number of bus owners and private buses affected by the recent taking over of some main routes by the Government Road Transport;

(*b*) how many of these affected owners are given some other alternative routes by way of compensation;

(*c*) if they would consider absorbing the drivers, conductors and cleaners thrown out of employment as a result of these having been taken over by the Government Road Transport to work in the Government Road Transport system?

A.—Sri H. SIDDAVEERAPPA (Minister for Home and Industries).—

(*a*) 139 Bus owners.
198 Bus services.

(*b*) 125.

(*c*) As the private bus services affected by monopoly are running on other alternative routes, there is no question of employees being thrown out. Applications, if any, will however be considered on merits as per rules.

ಶ್ರೀ ಬಿ. ಸಿ. ನಂಜುಂಡಯ್ಯ.— ರೋಡ್‌ಸೆಸ್, ಸೀಟಿಂಗ್ ಟ್ಯಾಕ್ಸ್ ಮುಂತಾದ ತೆರಿಗೆಗಳ ರೂಪದಲ್ಲಿ ಖಾಸಗೀ ಬಸ್ಸುಗಳಿಂದ ಸಮಾರು ನಾಲ್ಕು ಲಕ್ಷ ರೂಪಾಯಿ ಬರುವುದು ನಿಂತು ಹೋಯಿತು ಇದರಿಂದ ಎಂದು ಹೇಳಿದ್ದಾರೆ. ಮಾನಾಪಲೈಸ್ ಮಾಡಿದ ಮೇಲೆ ಸರ್ಕಾರಕ್ಕೆ ಹೆಚ್ಚು ವರಮಾನ ಬರುತ್ತದೆಯೆ!

ಶ್ರೀ ಎಚ್. ಸಿದ್ದವೀರಪ್ಪ.—ನಿಂತು ಹೋಗಿಸೆಯೆಂದು ನಾನು ಹೇಳಿಲ್ಲ ; ತಾವು ತಮ್ಮ (ಸಿ) ಭಾಗದ ಪ್ರಶ್ನೆಯಲ್ಲ ಎಷ್ಟುಬರುತ್ತಿತ್ತು ಎಂದು ಕೇಳಿದ್ದೀರಿ, ಅದಕ್ಕೆ ಇಷ್ಟು ಬರುತ್ತಿತ್ತು ಎಂದು ಹೇಳಿದ್ದೇನೆ ; ಯಾವುದೂ ನಿಂತು ಹೋಗಿಲ್ಲ.

ಶ್ರೀ ಬಿ. ಸಿ. ನಂಜುಂಡಯ್ಯ.—ಇದರಿಂದ ತೊಂದರೆಯಾದ ಬಸ್ ಮಾಲೀಕರಿಗೆ ಪರಿಹಾರವಾಗಿ alternative routes ಕೊಟ್ಟಿದ್ದೇವೆಂದು ಹೇಳಿದ್ದೀರಿ ; ಅವರಿಗೆ ಅನುಕೂಲವಾಗುವ ಮಾರ್ಗಗಳನ್ನು ಕೊಟ್ಟಿದ್ದೀರಾ!

ಶ್ರೀ ಎಚ್. ಸಿದ್ದವೀರಪ್ಪ.—ಅವರು ಎಲ್ಲಿ ಬೇಕೆಂದು ಕೇಳಿದ್ದರೆ ಅಲ್ಲ ಕೊಟ್ಟಿದ್ದೇವೆ. ಸ್ಟೇಟ್ ಟ್ರಾನ್ಸ್‌ಪೋರ್ಟ್ ಅಥಾರಿಟಿಯವರು ಯಾರಿಗೂ ಮನಸ್ಸು ನೋಯದೇಯಿರುವ ಹಾಗೆ ಮಾಡಿದ್ದಾರೆ.

ಶ್ರೀ ಬಿ. ಸಿ. ನಂಜುಂಡಯ್ಯ.—ನನ್ನ ಪ್ರಶ್ನೆ ಇದು: ಸರಿಯಾಗಿ ನೋಡಿ ಎಲ್ಲೆಲ್ಲ ಬಸ್‌ಗಳಿಗೆ ಅವಶ್ಯಕತೆ ಇದೆ ಎಂಬುದನ್ನು ನೋಡಿ ಕೊಟ್ಟರೋ ಅಥವಾ ಸುಮ್ಮನೆ ಪರಿಹಾರ ಕೊಡಬೇಕೆಂದು ಕೊಟ್ಟರೊ?

ಶ್ರೀ ಎಚ್. ಸಿದ್ದವೀರಪ್ಪ.—ರೀಜನರ್ ಟ್ರಾನ್ಸ್‌ಪೋರ್ಟ್ ಅಥಾರಿಟಿಯವರೂ ಸ್ಟೇಟ್ ಟ್ರಾನ್ಸ್‌ಪೋರ್ಟ್ ಅಥಾರಿಟಿಯವರೂ ಪರಿಶೀಲನೆಮಾಡಿ ನೋಡಿ ಎಲ್ಲ ಕೊಡಬಹುದೋ ಅಲ್ಲ ಕೊಟ್ಟಿದ್ದಾರೆ.

ಶ್ರೀ ಬಿ. ಸಿ. ನಂಜುಂಡಯ್ಯ.—ಅಲ್ಲಿ preference ಕೊಟ್ಟಿದ್ದೀರಾ ?

Mr. SPEAKER.—Preference to those who had lost.

Sri H. SIDDAVEERAPPA.—That has been taken into consideration by the Regional and State Transport Authorities.

ಶ್ರೀ ಬಿ. ಸಿ. ನಂಜುಂಡಯ್ಯ.—(ಡಿ) ಭಾಗದ ಪ್ರಶ್ನೆಯಲ್ಲಿ ' Whether it is a fact that the Government have issued circulars to the concerned authorities to allow the Road Transport Buses to overload the passengers as well as luggage ' ಎಂದು ಕೇಳಿರುವುದಕ್ಕೆ ಇಲ್ಲವೆಂದು ಹೇಳಿದ್ದೀರಿ ; ಯಾವುದಾದರೂ ರಸ್ತೆಗಳಲ್ಲಿ ಹೋಗಿ ರೋಡ್ ಟ್ರಾನ್ಸ್‌ಪೋರ್ಟ್ ಬಸ್ಸುಗಳನ್ನು ನೋಡಿ ಎಷ್ಟು ಜನ ಪ್ರಯಾಣೀಕರಿದ್ದಾರೆಂದು ಚೆಕ್ ಮಾಡಿದ್ದಾರೆಯೆ ?

ಶ್ರೀ ಎಚ್. ಸಿದ್ದವೀರಪ್ಪ.—ನಮಗೆ ಲೆಕ್ಕಗಳು ಬರುತ್ತವೆ, ಅದರಿಂದ ಗೊತ್ತಾಗುತ್ತದೆ.

ಶ್ರೀ ಬಿ. ಸಿ. ನಂಜುಂಡಯ್ಯ.—ರೋಡ್ ಟ್ರಾನ್ಸ್‌ಪೋರ್ಟ್ ಬಸ್ಸುಗಳಲ್ಲ ಓವರ್ ಲೋಡ್ ' ಆಗಿ ಜನರಿಗೆ ತೊಂದರೆಯಾಗುತ್ತಿದೆಯೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಶ್ರೀ ಎಚ್. ಸಿದ್ದವೀರಪ್ಪ.—ಮೊನ್ನೆತಾನೆ ಅರಿಕೆ ಮಾಡಿಕೊಂಡಿದ್ದೇನೆ. It is not altogether without any foundation.

ಶ್ರೀ ಬಿ. ಸಿ. ನಂಜುಂಡಯ್ಯ.—ಹೀಗೆ ಓವರ್ ಲೋಡ್ ಮಾಡುವುದೂ ಅಲ್ಲದೆ ಬಸ್ಸುಗಳು ಕಾಲಕ್ಕೆ ಸರಿಯಾಗಿ ಹೋಗದೆಯಿರುವುದರಿಂದ ಜನರಿಗೆ ತೊಂದರೆಯಿಲ್ಲವೆ?

Sri H. SIDDAVEERAPPA.—I have pleaded with the Hon'ble Member to kindly bear it for some time.

ಶ್ರೀ ಎಂ. ರಾಜಶೇಖರಮೂರ್ತಿ.—Alternative routes ಕೊಟ್ಟಿದ್ದೇವೆಂದು ತಿಳಿಸಿದೆ. ಹೀಗೆ ಕೊಡುವಾಗ ಎಲ್ಲರಿಂದಲೂ ಅರ್ಜಿಗಳನ್ನು ಕರೆದಿದ್ದರೊ ಅಥವಾ ಯಾರು ಕಳೆದುಕೊಂಡರೋ ಅವರಿಗೆ ಮಾತ್ರ ಮಂಜೂರು ಮಾಡಿದ್ದರೊ?

ಶ್ರೀ ಎಚ್. ಸಿದ್ದವೀರಪ್ಪ.—ರೂಲ್ಸ್ ಪ್ರಕಾರ ಎಲ್ಲಾ ಆಗಿದೆ.

ಶ್ರೀ ಎಂ. ರಾಜಶೇಖರಮೂರ್ತಿ.—ಯಾರು ಬಸ್ ರೂಟ್ಸ್ ಕಳೆದುಕೊಂಡರೋ ಅವರಿಂದ ಮಾತ್ರ ಅರ್ಜಿಗಳನ್ನು ಕರೆದು ಅವರಿಗೆ ಕೊಟ್ಟರೆ ?

ಶ್ರೀ ಎಚ್. ಸಿದ್ದವೀರಪ್ಪ.—ಇಲ್ಲ.

ಶ್ರೀ ಎಂ. ರಾಜಶೇಖರಮೂರ್ತಿ.—ರೂಲ್ಸಿಗೆ ವಿರುದ್ಧವಾಗಿ, Fundamental rightsಗೆ ವಿರುದ್ಧವಾಗಿ ಕೆಲವರಿಂದ ಮಾತ್ರ ಅರ್ಜಿಗಳನ್ನು ಕರೆದು ಇವರಿಗೆ ಕೊಟ್ಟಿದ್ದಾರೆಂಬುದು ತಮ್ಮ ಗಮನಕ್ಕೆ ಬಂದಿದೆಯೆ ?

Sri H. SIDDAVEERAPPA.—Fundamental rights are fundamental rights. They will never be infringed.

Sri K. S. VASAN.—Of the bus owners who have lost services by this monopolisation, you have shown that fourteen have not yet been given alternative routes. May I take it that these fourteen will be provided with alternative routes early ?

Sri H. SIDDAVEERAPPA.—I understand that four or five have not yet been given alternative routes for the reason that they have not yet asked for the same.

Sri K. S. VASAN.—Of the drivers, conductors and cleaners who have lost work due to this monopolisation, will Government consider taking them into their service if they apply ?

ಶ್ರೀ ಎಚ್. ಸಿದ್ದವೀರಪ್ಪ.—ಇಂಥ ಪ್ರಶ್ನೆ ಇನ್ನೂ ಉದ್ಭವಿಸಿಲ್ಲ, ಇಂಥಾದ್ದು ಬಂದಾಗ ನೋಡೋಣ. ಈಗ ಯಾರೂ ನಮ್ಮನ್ನು ಕೆಲಸದಿಂದ ತೆಗೆದುಬಿಟ್ಟಿದ್ದಾರೆ, ತೊಂದರೆಯಾಗಿದೆ ಎಂದು ಹೇಳಿ ಬಂದಿಲ್ಲ.

ಶ್ರೀ ಎ. ಆರ್. ನಾಯ್ಡು.—ಕೆಲವು ತಿಂಗಳ ಹಿಂದೆ ರೋಡ್ ಟ್ರಾನ್ಸ್‌ಪೋರ್ಟ್ ಇಲಾಖೆಯ ಸ್ಪೋರ್ಸ್‌ನಲ್ಲಿ ಭಾರಿ ಕಳವಾಗಿತ್ತೆ ?

Sri H. SIDDAVEERAPPA.—I do not know how it arises. I want notice. ನನ್ನ ಗಮನಕ್ಕೆ ಇಂಥವ್ಯಾವುದೂ ಬಂದಿಲ್ಲ.

ಶ್ರೀ ಎಸ್. ಸಿದ್ದಪ್ಪ.—ಆರು ರಸ್ತೆಗಳನ್ನು ಸರ್ಕಾರದವರು ಮೊನಾಪಲಿ ಮಾಡಿಕೊಂಡಮೇಲೆ ಅಲ್ಲಿ ಪ್ರಯಾಣಿಕರಿಗೆ ಅನಾನುಕೂಲವಾಗಿದೆ ಎಂಬುದು ತಮ್ಮ ಗಮನಕ್ಕೆ ಬಂದಿದೆಯೆ ?

ಶ್ರೀ ಎಚ್. ಸಿದ್ದವೀರಪ್ಪ.—ಆಗಲೇ ಹೇಳಿದ್ದೇನೆ, ಸ್ವಲ್ಪ ಆಗಿದೆ ಎಂದು ಒಪ್ಪಿಕೊಂಡಿದ್ದೇನೆ ಅದನ್ನು ಸರಿಪಡಿಸುತ್ತೇವೆ.

ಶ್ರೀ ಎಸ್. ಸಿದ್ದಪ್ಪ.—ಅನೇಕ ಸಾರಿ ಈ ವಿಚಾರವನ್ನು ಪತ್ರಿಕೆಗಳೂ ನಾವೂ ಬರೆದಿಲ್ಲವೆ ?

ಅಧ್ಯಕ್ಷರು.—ಅವರು ಒಪ್ಪಿದ್ದಾರೆ, ಸರಿಪಡಿಸುತ್ತೇವೆಂದು ಹೇಳಿದ್ದಾರೆ.

ಶ್ರೀ ಎಸ್. ಸಿದ್ದಪ್ಪ.—ಜನರಿಗೆ ತೊಂದರೆಯಾಗಿದೆಯೆಂಬುದು ಅವರಿಗೆ ಮನವರಿಕೆಯಾಗಿದೆಯೆ ?

Mr. SPEAKER.—He has pleaded for some time to rectify those matters.

ಶ್ರೀ ಎಸ್. ಸಿದ್ದಪ್ಪ.—ಬಸ್ಸುಗಳನ್ನು ಹೆಚ್ಚು ಮಾಡಲು ಕಾರ್ಯಕ್ರಮ ತೆಗೆದುಕೊಂಡಿದ್ದೀರಾ?

ಶ್ರೀ ಎಚ್. ಸಿದ್ದವೀರಪ್ಪ.—ಆಗಲೇ ತೆಗೆದುಕೊಂಡಿದ್ದೇವೆ, ಸಧ್ಯದಲ್ಲೇ ಬರುತ್ತವೆ.

ಶ್ರೀ ಎಸ್. ಸಿದ್ದಪ್ಪ.—ಇತರ ಬಸ್ಸುಗಳಲ್ಲಿದ್ದು ಜೀವನ ಮಾಡಿಕೊಂಡಿದ್ದು ಈಗ ಕಳೆದುಕೊಂಡಿರುವವರಿಗೆ ಬೇರೆ ಕೊಡಿಸುವುದಕ್ಕೆ ಪ್ರಯತ್ನ ಮಾಡಿದ್ದೀರಾ?

ಶ್ರೀ ಎಚ್. ಸಿದ್ದವೀರಪ್ಪ.—ಆಗಲೇ ಹೇಳಿದ್ದೇನೆ.

Professors, Assistant Professors and Lecturers in Mysore University.

Q.—485. Sri U. M. MADAPPA (Chamarajanagar).—

Will the Government be pleased to state :—

(*a*) the number of Professors, Assistant Professors and Lecturers for each of the Departments of study in the University of Mysore ;

(*b*) the posts that were lying vacant each year in each Department since 1950 to date ;

(*c*) the number of Professors and Assistant Professors taken this year to each Department (their names and grades to be given) ?

A.—Sri A. G. RAMACHANDRA RAO (Minister for Law and Education).—

(*a*) Statement 'A' appended.
(*b*) Statement 'B' appended.
(*c*) Statement 'C' appended.